ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2211

ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 26.03.2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಶೌಚಾಲಯಗಳಲ್ಲಿ ಹಣಪಾವತಿ ವಿವರವನ್ನು ಕಡ್ಡಾಯವಾಗಿ ನಾಮಫಲಕ ಅಳವಡಿಸುವ ಮುಖಾಂತರ ಪ್ರಯಾಣಿಕರಿಗೆ ತಿಳಿಸಲಾಗುವುದೇ; ಇಲ್ಲವಾದಲ್ಲಿ, ಬೇಕಾಬಿಟ್ಟಿಯಾಗಿ ಹಣವಸೂಲಿ ಮಾಡುವ ದಂಧೆಗೆ ಸರ್ಕಾರವೇ ಅವಕಾಶ ಮಾಡಿಕೊಟ್ಟಾಂತಾಗುವುದಿಲ್ಲವೇ;	ಕೆ.ಎಸ್.ಆರ್.ಟಿ.ಸಿ., ಬಸ್ ನಿಲ್ದಾಣದ ಶೌಚಾಲಯಗಳಲ್ಲಿ ಹಣಪಾವತಿ ವಿವರವನ್ನು ಕಡ್ಡಾಯವಾಗಿ ನಾಮಫಲಕ ಅಳವಡಿಸುವ ಮುಖಾಂತರ ಪ್ರಯಾಣಿಕರಿಗೆ ತಿಳಿಸಲಾಗುತ್ತಿದೆ. ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಶೌಚಾಲಯಗಳಲ್ಲಿ ಮೂತ್ರಾಲಯ ಬಳಕೆ ಉಚಿತ ಹಾಗೂ ಶೌಚಾಲಯ ಬಳಕೆಗೆ ದರವನ್ನು ನಿಗದಿಪಡಿಸಿರುವ ಸಂಬಂಧ ವಿವರವನ್ನು ದಪ್ಪಕ್ಷರಗಳಲ್ಲಿ ಬರೆಯಿಸಿ, ಕಡ್ಡಾಯವಾಗಿ ನಾಮಫಲಕ ಅಳವಡಿಸಲಾಗಿದೆ.
ಆ)	ಕೆಲವು ಕಡೆಗಳಲ್ಲಿ ಉದ್ದೇಶಪೂರ್ವಕವಾಗಿ ಹಣಪಾವತಿ ವಿವರಗಳನ್ನು ಅಳಿಸಿ ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳಾವುವು;	ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಶೌಚಾಲಯಗಳಲ್ಲಿ ಉದ್ದೇಶಪೂರ್ವಕವಾಗಿ ಹಣಪಾವತಿ ವಿವರವನ್ನು ಅಳಿಸಿ ಹಾಕಿರುವ ಅಂಶವು ನಿಗಮದ ಗಮನಕ್ಕೆ ಬಂದಲ್ಲಿ, ಕೂಡಲೇ ದರಗಳ ಮಾಹಿತಿಯನ್ನು ಪ್ರದರ್ಶಿಸಲು ಕ್ರಮ ವಹಿಸಲಾಗುವುದು ಹಾಗೂ ಈ ಕುರಿತು ನಿರ್ದಿಷ್ಟ ದೂರುಗಳು ಸ್ವೀಕಾರವಾದಲ್ಲಿ, ಸ್ವಚ್ಛತಾ ಗುತ್ತಿಗೆದಾರರಿಗೆ ಕರಾರು ನಿಯಮಾನುಸಾರ ದಂಡ ವಿಧಿಸಲು ಕ್ರಮ ವಹಿಸಲಾಗಿದೆ.
ಇ)	ಶೌಚಾಲಯಗಳಲ್ಲಿ ಚಿಲ್ಲರೆ ಕೊರತೆಯಿಂದ ಅನಾವಶ್ಯಕವಾಗಿ ಪ್ರಯಾಣಿಕರು ಕಿರುಕುಳ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ Prepaid card ವ್ಯವಸ್ಥೆಯನ್ನು ಜಾರಿಗೆ ತರಲು ಇಲಾಖೆ ಕ್ರಮ ತೆಗೆದುಕೊಳ್ಳುವುದೇ; ಇಲ್ಲವಾದಲ್ಲಿ ಕಾರಣಗಳೇನು?	ಕೆ.ಎಸ್.ಆರ್.ಟಿ.ಸಿ. ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ, ಬಹುತೇಕ ತಾಲ್ಲೂಕು/ಹೋಬಳಿ ಮತ್ತು ಗ್ರಾಮಾಂತರ ಬಸ್ ನಿಲ್ದಾಣಗಳಾಗಿರುತ್ತವೆ. ಗ್ರಾಮಾಂತರ ವ್ಯಾಪ್ತಿಯ ಸಾರ್ವಜನಿಕ ಪ್ರಯಾಣಿಕರ ದೃಷ್ಟಿಯಿಂದ ಶೌಚಾಲಯಗಳಲ್ಲಿ ಹಣ ಪ್ಪಾವತಿಯ ಕುರಿತು Prepaid card ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಸ್ತಾವನೆಯು ಪ್ರಸ್ತುತ ಇರುವುದಿಲ್ಲ.

ಸಂಖ್ಯೆ: ಟಿಡಿ 165 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು